ಕಾರ್ಮಿಕ ಇಲಾಖೆಯ ನಿಯಮಗಳ ಉಲ್ಲಂಘನೆ

2249 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಂಗಳೂರಿನಲ್ಲಿರುವ ಕೇಂದ್ರಿಯ ಅಡಿಕೆ ಮತ್ತು ಕೊಕ್ಕೋ ಮಾರಾಟ ಮತ್ತು ಪರಿಷ್ಕರಣೆ ಸಹಕಾರಿ ಸಂಸ್ಥೆಯು (ಕ್ಯಾಂಪ್ಕೊ) ಕಾರ್ಮಿಕ ಇಲಾಖೆಯಿಂದ ಮಾನ್ಯತೆ ಪಡೆದುಕೊಂಡಿರುವುದು ನಿಜವೇ?*

ಆ) *ಹಾಗಿದ್ದಲ್ಲಿ ಇಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು? (ಕಾರ್ಮಿಕರ ಸಂಖ್ಯೆ, ಅಧಿಕಾರಿಗಳ ಹೆಸರು ಪದನಾಮದ ವಿವರಗಳನ್ನು ಒದಗಿಸುವುದು?*

ಇ) *ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಆಡಳಿತ ನಿರ್ದೇಶಕರು ಕಾರ್ಮಿಕ ಇಲಾಖೆಯ ನಿಯಮಗಳನ್ನು ಉಲ್ಲಂಘಿಸಿ ಅಕ್ರಮವಾಗಿ ನೇಮಕಾತಿಗಳನ್ನು ಮಾಡಿಕೊಂಡಿರುವುದು ಹಾಗೂ ನೇಮಕ ಮಾಡಿಕೊಂಡಿರುವ ನೌಕರರುಗಳಿಗೆ ಕಾರ್ಮಿಕ ಇಲಾಖೆಯ ನಿಯಮಗಳ ಪ್ರಕಾರ ವೇತನ ಹಾಗೂ ಇತರೆ ಸೌಲಭ್ಯಗಳನ್ನು ಕಲ್ಪಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಹಾಗಿದ್ದಲ್ಲಿ ಈ ಸಂಸ್ಥೆಯ ಮೇಲೆ ಮೇಲ್ಕಂಡ ಕಾರಣಗಳಿಗಾಗಿ ಹಾಗೂ ಇತರೆ ಬೇರೆ ಬೇರೆ ಕಾರಣಗಳಿಗಾಗಿ ಕಾರ್ಮಿಕ ಇಲಾಖೆಯವರು ಹೂಡಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು? (ಮೊಕದ್ದಮೆಗಳ ವಿವರಗಳನ್ನು ಒದಗಿಸುವುದು).*

ಉ) *ಇದುವರೆವಿಗೂ ಇತ್ಯರ್ಥವಾಗದೇ ಉಳಿದಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು?*

ಊ) *ಕಾರ್ಮಿಕ ಇಲಾಖೆಯ ನಿಯಮಗಳನ್ನು ಉಲ್ಲಂಘನೆ ಮಾಡುತ್ತಿರುವ ಇಲ್ಲಿನ ಆಡಳಿತ ನಿರ್ದೇಶಕರ ಮೇಲೆ ಸರ್ಕಾರ ಶಿಸ್ತಿನ ಕ್ರಮ ಕೈಗೊಳ್ಳುವುದೇ?*

ಋ) *ಹಾಗಿಲ್ಲದಿದ್ದಲ್ಲಿ ಕಾರಣಗಳೇನು?*

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) :

ಅ) ಇಲ್ಲ. ಕಾರ್ಮಿಕ ಇಲಾಖೆಯಿಂದ ಮಾನ್ಯತೆ ಪಡೆಯುವ ಅವಶ್ಯಕತೆ ಇರುವುದಿಲ್ಲ.

ಆ) **ಕಾರ್ಮಿಕರ ಸಂಖ್ಯೆ**

ಅ) ಅಡಿಕೆ ವಿಭಾಗ

1.	ಸಿಬ್ಬಂದಿ	96
2.	ಕಾರ್ಮಿಕರು	90
3.	ಗುತ್ತಿಗೆ ಕಾರ್ಮಿಕರು	14

ಆ) ಚಾಕೋಲೇಟ್ ವಿಭಾಗ

1. ಸಿಬ್ಬಂದಿ 163
2. ಕಾರ್ಮಿಕರು 36
3. ಗುತ್ತಿಗೆ ಕಾರ್ಮಿಕರು 24

ಇ) ಅಧಿಕಾರಿಗಳ ವಿವರ

1. ಶ್ರೀ ಕೆ. ಪ್ರಮೋದ್ ಕುಮಾರ್ ರೈ ವ್ಯವಸ್ಥಾಪಕ ನಿರ್ದೇಶಕರು
2. ಶ್ರೀ ಎನ್.ಇ. ಕೃಷ್ಣನ್ ಕುಟ್ಟಿ ಕಾರ್ಯದರ್ಶಿ

ಇ) ನೇಮಕಾತಿಯ ವಿಷಯ ಕಾರ್ಮಿಕ ಇಲಾಖೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆದಾಗ್ಯೂ ಆಡಳಿತ ವರ್ಗದವರು ರಾಜೀ ಸಂಧಾನದ ಷರತ್ತುಗಳನ್ನು ಉಲ್ಲಂಘಿಸಿದ್ದಾರೆಂದು ಕಾರ್ಮಿಕರಿಂದ ಮನವಿ ಬಂದಿದೆ. ಸದರಿ ಮನವಿಯನ್ನು ಪ್ರತ್ಯೇಕವಾಗಿ ಪರಿಶೀಲಿಸಲಾಗುತ್ತಿದೆ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಯಾವುದೇ ಸಾರ್ವಜನಿಕ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ವಿರುದ್ಧ ಶಿಸ್ತಿನ ಕ್ರಮವನ್ನು ಜರುಗಿಸಲು ಕಾರ್ಮಿಕ ಕಾನೂನುಗಳ ಅಡಿಯಲ್ಲಿ ಅವಕಾಶ ಇರುವುದಿಲ್ಲ.

ಋ) ಅನ್ವಯಿಸುವುದಿಲ್ಲ.

ರಾಜ್ಯದಲ್ಲಿ ಆರ್ಥಿಕ ಮಿತವ್ಯಯ.

2250 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) ಮತ್ತು ಶ್ರೀ ಬಿ. ನಂಜಮರಿ (ತಿಪಟೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಆರ್ಥಿಕ ಮಿತವ್ಯಯ ಎಂದಿನಿಂದ ಜಾರಿ ಬಂದಿದೆ. ಅದು ಈಗಲೂ ಸಹ ಜಾರಿಯಲ್ಲಿದೆಯೆ ಅದಕ್ಕೆ ಕಾರಣಗಳೇನು?

ಆ) ಯಾವ ಯಾವ ಇಲಾಖೆಗಳಲ್ಲಿ ಆರ್ಥಿಕ ಮಿತವ್ಯಯ ಜಾರಿಯಲ್ಲಿದೆ ಮತ್ತು ಯಾವ ಯಾವ ಇಲಾಖೆಗಳಲ್ಲಿ ಇದನ್ನು ಮನ್ನಾ ಮಾಡಲಾಗಿದೆ?

ಇ) ಶಿಕ್ಷಣ ಇಲಾಖೆಯ ಬೋಧಕೇತರರಿಗೆ ಆರ್ಥಿಕ ಮಿತವ್ಯಯ ಆದೇಶವನ್ನು ರದ್ದುಪಡಿಸಲು ಸರ್ಕಾರ ತೀರ್ಮಾನಿಸಿದೆಯೆ? ಮತ್ತು ಕನಿಷ್ಠ ಪಕ್ಷ ದಿ. 1.6.92ರೊಳಗೆ ನೇಮಕವಾಗಿ ಅನುಮೋದನೆಗೊಂಡ ಬೋಧಕೇತರರಿಗೆ ಇದನ್ನು ಮನ್ನಾ ಮಾಡಿ ಸಂಬಳ ವೇತನ ನೀಡಲಾಗುವುದೇ?